**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು.594/2023**

**CW-1 /PW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಈರಪ್ಪ |
| ತಂದೆ ಹೆಸರು | ಃ | ದೇವೇಂದ್ರಪ್ಪ |
| ವಯಸ್ಸು | ಃ | 48 |
| ಉದ್ಯೋಗ | ಃ | ಗುಮಾಸ್ತ |
| ವಿಳಾಸ | ಃ | ರಾಯಚೂರುದಿ |

**ಮುಖ್ಯ ವಿಚಾರಣೆ ಅಬಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**
**ಪ್ರಮಾಣೀಕರಿಸಿದ ದಿನಾಂಕಃ 14-10-2024**

ಆರೋಪಿತರು ಗೊತ್ತು. ಚಾಸಾ-4 ರಿಂದ 13 ಗೊತ್ತು. ದಿನಾಂಕ 12.11.2022 ರಂದು ಬೆಳಿಗ್ಗೆ 9.10 ಗಂಟೆಗೆ ಚಂದ್ರಬಂಡ ರಸ್ತೆಗೆ ಹೊಂದಿಕೊಂಡಿರುವ ಶ್ರೀ ವೀರಾಜಂನೇಯ್ಯ ಗುಡಿಯ ಮುಂದಿನ ಗೇಟು ಕೀಲಿ ಹಾಕಿದ್ದು ಗೊತ್ತಾಗಿ ನಾನು ಮತ್ತು ಚಾಸಾ-8 ಮತ್ತು 9 ರವರು ಸೇರಿ ಗುಡಿ ಹತ್ತಿರ ಹೋದಾಗ ಅಲ್ಲಿ 1 ನೇ ಆರೋಪಿ ಮತ್ತು ಇತರರು ಗೇಟ್ ಬೀಗ ಹಾಕಿದ್ದು ಗೊತ್ತಾಗಿ ಆಗ ಚಾಸಾ-9 ರವರು 1 ನೇ ಆರೋಪಿಗೆ ಬೆಳಿಗ್ಗೆ 09.10 ಗಂಟೆಗೆ ಫೋನ್ ಮಾಡಿ ಗುಡಿಯ ಗೇಟನ್ನು ಯಾಕೇ ಬಂದು ಮಾಡಿರುತ್ತೀರಾ ಈ ದಿನ ಶನಿವಾರ ಇದೇ ಜನರಿಗೆ ತೊಂದರೆ ಆಗುತ್ತಿದ್ದೆ ಎಂದು ಕೇಳಿ ಬಂದು ಕೀಲಿಯನ್ನು ತೆಗೆಯಿರಿ ಎಂದು ಕೇಳಿದಾಗ ಆಗ 1 ನೇ ಆರೋಪಿ, ಓಂಕಾರಗೌಡ, ಜಂಬಣ್ಣ, ಹನುಮಂತರಾಯ ಪೂಜಾರಿ, ರಮೇಶ ಬೆಲ್ದಾರ, ವೆಂಕಟೇಶ ನಾಯಕ, ಬೂದಿ ಬಸವ, ಗಜೇಂದ್ರ, ಸಿದ್ದು ಹೊಟೇಲ್ ಮತ್ತು ವಿರೇಶ ಆಟೋ ಎಲ್ಲರೂ ಸೇರಿ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಅವಾಚ್ಯವಾಗಿ ಬೈಯುತ್ತ ನಮ್ಮ ಮೇಲೆ ಹಲ್ಲೆ ಮಾಡಲು ಅವಾಚ್ಯ ಶಬ್ದಗಳು ಆದ ಸೂಳೇ ಮಕ್ಕಳೇ ಎಂದು ಬೈದು ನಮ್ಮ ಹತ್ತಿರ ಕೀಲಿ ಕೈ ಇರುವುದಿಲ್ಲ ಎಂದು ಹೇಳಿದರು. 1 ನೇ ಆರೋಪಿ ಚಾಸಾ-6 ರವರಿಗೆ ಕಲ್ಲಿನಿಂದ ಬಲಗೈ ಮಧ್ಯದ ಬೆರಳಿಗೆ ಹೊಡೆದಿರುತ್ತಾರೆ. ನಂತರ 2 ನೇ ಆರೋಪಿ ಚಾಸಾ-6 ರವರಿಗೆ ಕಟ್ಟಿಗೆಯಿಂದ ತಲೆಗೆ ಹೊಡೆದಿರುತ್ತಾರೆ ಆಗ ಚಾಸಾ-6 ರವರಿಗೆ ಭಾರಿ ರಕ್ತಗಾಯವಾಗಿತ್ತು. 3 ನೇ ಆರೋಪಿ ಚಾಸಾ-6 ರವರಿಗೆ ಅದೇ ಕಟ್ಟಿಗೆಯಿಂದ ಮೊಣಕಾಲು ಕೆಳಗೆ ಹೊಡೆದಿರುತ್ತಾನೆ. 4 ನೇ ಆರೋಪಿ ಚಾಸಾ-7 ರವರಿಗೆ ಬಲಗೈ ಹಿಡಿದು ಉಂಗುರ ಬೆರಳನ್ನು ತಿರುವಿರುತ್ತಾರೆ. ನಂತರ ಆರೋಪಿತರು ಎಲ್ಲರೂ ಇಲ್ಲಿಂದ ಸುಮ್ಮನೇ ಹೋದರೆ ಸರಿ ಇಲ್ಲದಿದ್ದರೆ ಜೀವಂತ ಬಿಡುವುದಿಲ್ಲ ಅಂತ ಅವಾಚ್ಯವಾಗಿ ಬೈದು ಜೀವದ ಬೆದರಿಕೆ ಹಾಕಿರುತ್ತಾರೆ. ಆಗ ಚಾಸಾ-4 ಮತ್ತು 5 ರವರು ಜಗಳವನ್ನು ಬಿಡಿಸಿಕೊಂಡಿರುತ್ತಾರೆ. ನಂತರ ಹಿರಿಯ ಜೊತೆ ಸೇರಿ ಮರುದಿನ ಪೋಲಿಸರಿಗೆ ದೂರನ್ನು ನೀಡಿರುತ್ತೇನೆ. ನಂತರ

ಮಧ್ಯಾಹ್ನ 2 ಗಂಟೆಗೆ ಪೋಲಿಸರು ಗುಡಿ ಹತ್ತಿರ ಬಂದು ಸಾಕ್ಷಿದಾರರನ್ನು ವಿಚಾರಣೆ ಮಾಡಿರುತ್ತಾರೆ.

ಸಾಕ್ಷಿದಾರರು ಗುರುತಿಸಿದ ದೂರನ್ನು ನಿಪಿ-1 ಎಂದು ಸಹಿಯನ್ನು ನಿಪಿ-1 ಎ ಎಂದು, ನಂತರ ಪೋಲಿಸರು ಬಂದು ನನ್ನ ಸಹಿ ಪಡೆದಿರುತ್ತಾರೆ ಸದರಿ ದಾಖಲಾತಿ ಪಂಚನಾಮೆ ಆದ್ದರಿಂದ ಅದನ್ನು ನಿಪಿ-2 ಎಂದು ಸಹಿಯನ್ನು ನಿಪಿ-2 ಎ ಎಂದು, ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇದ್ದ ಕಟ್ಟಿಗೆ ಮತ್ತು ಹಿಡಿ ಗಾತ್ರದ ಕಲ್ಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ 2 ರಿಂದ 5 ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಗೈರು ಹಾಜರು ಇದ್ದು ಗುರುತಿನ ಬಗ್ಗೆ ವಕೀಲರು ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಕಾಲವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ಯಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ, ರಾಯಚೂರು.**